## ರಾಜ್ಯದಲ್ಲಿ ನಿರ್ಗತಿಕ ಮಕ್ಕಳ ಅಭಿವೃದ್ಧಿ

1698 (2208) ಶ್ರೀ ಪೂಜಾರ್ ಪಿ.ಹೆಚ್. ( ಬಾಗಲಕೋಟೆ ) - ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರ್ಗತಿಕ ಮಕ್ಕಳ ಅಭಿವೃದ್ಧಿ ಕುರಿತಂತೆ ಮಹಿಳಾ ಅಭಿವೃದ್ಧಿ ನಿಗಮವು ಹಮ್ಮಿಕೊಂಡ ಕಾರ್ಯಕ್ರಮಗಳೇನು? ಬಾಗಲಕೋಟೆ ಜಿಲ್ಲೆಯಲ್ಲಿರುವ ನಿರ್ಗತಿಕ ಮಕ್ಕಳ ಕುಟೀರಗಳೆಷ್ಟು? ಹಾಗೂ ಎಷ್ಟು ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ ;

ಆ) ಸದರಿ ನಿಗಮದಿಂದ ಕೌಶಲ್ಯ ಮತ್ತು ಸ್ವಯಂ ಉದ್ಯೋಗ ತರಬೇತಿ ಅಡಿಯಲ್ಲಿ ಎಷ್ಟು ಗ್ರಾಮೀಣ ಹಾಗೂ ಪಟ್ಟಣ ಮಹಿಳೆಯರಿಗೆ ಅನುಕೂಲತೆ ಒದಗಿಸಲಾಗಿದೆ ; (ಪ್ರತ್ಯೇಕ ವಿವರ ನೀಡುವುದು) ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಕಾರ್ಯಕ್ರಮ ಹಮ್ಮಿ ಕೋರಿರುವುದಿಲ್ಲ. ಬಾಗಲಕೋಟೆಯಲ್ಲಿ ಒಟ್ಟು 12 ನಿರ್ಗತಿಕ ಮಕ್ಕಳ ಕುಟೀರಗಳು ಇದ್ದು, 300 ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ.

ಆ) 2002-03ನೇ ಸಾಲಿನಲ್ಲಿ 945 ಮಹಿಳೆಯರ ಕೌಶಲ್ಯ ಮತ್ತು ಸ್ವಯಂ ಉದ್ಯೋಗ ತರಬೇತಿಯಡಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಕೂಲ ಪಡೆದಿರುತ್ತಾರೆ.

## ಬಾಗಲಕೋಟೆ ನಗರದ ಎತ್ತರದ ಪ್ರದೇಶಗಳಾದ ಕಿಲ್ಲಾ ಮತ್ತು ಜೈನಸೇಟ ಪ್ರದೇಶಗಳ ಸ್ವಾಧೀನ

1699 (2209) ಶ್ರೀ ಪೂಜಾರ್ ಪಿ.ಹೆಚ್. ( ಬಾಗಲಕೋಟೆ ) - ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಬಾಗಲಕೋಟೆ ನಗರದ ಎತ್ತರದ ಪ್ರದೇಶಗಳಾದ ಕಿಲ್ಲಾ ಮತ್ತು ಜೈನಸೇಟ ಪ್ರದೇಶಗಳ ಮನೆಗಳನ್ನು 523ಎಫ್ಆರ್ಎಲ್ ಅಥವಾ 100 ಮೀಟರ್ ದೂರದ ಸೀಮಾ ರೇಖೆಯನ್ನು ಹೊರತುಪಡಿಸಿ, ನಡುಗಡ್ಡೆಯಂತಾಗಲಿರುವ ಕಾರಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಪುನರ್ವಸತಿಗೊಳಿಸಲು ಭರವಸೆ ನೀಡಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆಯೇ ;

ಆ) ಹಾಗಿದ್ದಲ್ಲಿ, ಅದರ ಪ್ರಗತಿ ಏನು ; (ವಿವರ ನೀಡುವುದು) ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಆಲಮಟ್ಟಿ ಜಲಾಶಯದಲ್ಲಿ 519.60 ಮೀಟರ್‌ವರೆಗೆ ಸೆಪ್ಟೆಂಬರ್ 2002 ರಲ್ಲಿ ನೀರು ನಿಲ್ಲಿಸಿದಾಗ ಬಾಗಲಕೋಟೆ ಶಹರದಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಈ ಸಮಸ್ಯೆಗಳನ್ನು ಬಗೆಹರಿಸಲು, ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 124 ಆರ್‌ಇಎಚ್ 2002 ಬೆಂಗಳೂರು ದಿ: 16.11.2002ರಡಿಯಲ್ಲಿ, ವಿಶೇಷ ಪ್ಯಾಕೇಜ್ ಹೊರಡಿಸಿರುತ್ತಾರೆ.

ಈ ಪ್ಯಾಜಕೇಜಿನನ್ವಯ ಬಾಗಲಕೋಟೆ ಪಟ್ಟಣದಲ್ಲಿ, ಆಲಮಟ್ಟಿ ಜಲಾಶಯದ 521 ಮೀಟರ್‌ನಿಂದ 523 ಮೀಟರ್ ಮಧ್ಯದಲ್ಲಿ ಬರುವ ಅಥವಾ ಹಿನ್ನೀರಿನ ಅಂಚಿನಿಂದ 100

ಮೀಟರ್ ಅಂತರದವರೆಗೆ ಬರುವ ಕಟ್ಟಡಗಳ ಸ್ವಾಧೀನತೆಗೆ ಹಾಗೂ ಪುನರ್ವಸತಿ ಕಲ್ಪಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಪೂರ್ವಭಾವಿ ಸರ್ವೆ ಕೆಲಸ ಪೂರ್ಣಗೊಂಡಿದೆ. ಹಾಗೂ ನವನಗರದಲ್ಲಿ ನಿವೇಶನ ಗುರ್ತಿಸುವ ಕಾರ್ಯ ಪೂರ್ಣ ಗೊಂಡಿದೆ.

ಸರ್ವೆ ಪ್ರಕಾರ ಈ ಭಾಗದ ವಿವರ ಇಂತಿದೆ.

| | 521 ಮೀ.ನಿಂದ 523 ಮೀ.ವರೆಗೆ | ಹಿನ್ನೀರಿನ ಅಂಚಿನಿಂದ 100ಮೀ. ವರೆಗೆ | ಒಟ್ಟು |
|---|---|---|---|
| ವಾರ್ಡ್ ನಂ.1 ಮತ್ತು 2 (ಕಿಲ್ಲಾ) | 399 | 907 | 1306 |
| ವಾರ್ಡ್ ನಂ.3 (ಜೈನಪೇಟ) | 91 | 366 | 457 |
| | 490 | 1273 | 1763 |

ಹಿನ್ನೀರಿನ ಅಂಚಿನಿಂದ 100 ಮೀ. ಅಂತದವರೆಗೆ ಕಟ್ಟಡಗಳನ್ನು ಸ್ವಾಧೀನತೆ ಕೈಗೊಂಡಾಗ ಈ ಭಾಗವು ನಡುಗಡ್ಡೆಯಾಗುವುದಿಲ್ಲ. ಈ ಆಸ್ತಿಗಳಿಗೆ ಮುಳುಗಡೆಯಾಗದ ಭಾಗದ ಸಂಪರ್ಕ ಇರುತ್ತದೆ. ಅಲ್ಲದೆ ಅಕ್ಕಪಕ್ಕದ ವಾರ್ಡುಗಳ ಆಸ್ತಿಗಳ ಸಂಪರ್ಕವಿರುತ್ತದೆ. ಆದ ಕಾರಣ ಸದ್ಯ ಸ್ವಾಧೀನತೆಗಾಗಿ ಯಾವ ಪ್ರಸ್ತಾವನೆ ತಯಾರಿಸಿರುವುದಿಲ್ಲ.

ಆ) ಮೇಲಿನ (ಅ) ನಲ್ಲಿ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

## ರಾಜ್ಯದಲ್ಲಿ ಅಂತ್ಯೋದಯ ಹಳದಿ ಕಾರ್ಡುಗಳು

1700 (1772) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) - ಮಾನ್ಯ ಆಹಾರ ಮತ್ತು ನಾಕರೀಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂತ್ಯೋದಯ ಹಳದಿ ಕಾರ್ಡ್‌ಗಳನ್ನು ಎಷ್ಟು ನೀಡಲಾಗಿದೆ ;

ಆ) ಬಿ.ಪಿ.ಎಲ್. ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಬಿ.ಪಿ.ಎಲ್ ಕಾರ್ಡ್ ವಿತರಣೆ ಯಾವಾಗ ಮಾಡುವುದು ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) 1. ಅಂತ್ಯೋದಯ ಪಡಿತರ ಚೀಟಿ 4,79,700

2. ಹಳದಿ ಪಡಿತರ ಚೀಟಿ 4,08,081

ಆ) ಬಿ.ಪಿ.ಎಲ್. ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆ ನಡೆಸಲಾಗಿದೆ. ಹೀಗೆ ಗುರುತಿಸಲಾಗಿರುವ ಕುಟುಂಬಗಳ ಪಟ್ಟಿಗಳನ್ನು ಕಂಪ್ಯೂಟರೀಕರಣ ಗೊಳಿಸಲಾಗುತ್ತಿದೆ. ಈ ಪಟ್ಟಿಗಳನ್ನು 6ನೇ ಏಪ್ರಿಲ್ 2003ರಿಂದ 19ನೇ ಏಪ್ರಿಲ್ 2003ರವರೆವಿಗೆ ಪ್ರತಿ ಗ್ರಾಮ:ಪಟ್ಟಣಗಳಲ್ಲಿ ಪ್ರಕಟಿಸಲಾಗುವುದು. ಇದರಿಂದಾಗಿ ಜನರಿಗೆ ಪಟ್ಟಿಯಲ್ಲಿನ ಲೋಪದೋಷಗಳನ್ನು ಗುರುತಿಸಲು ಸಾಧ್ಯವಾಗುವುದು.

ಇ) 2003ರ ಏಪ್ರಿಲ್ ಅಂತ್ಯದ ಒಳಗೆ ಪೂರ್ಣಗೊಳಿಸಲಾಗುವುದು.